# ಚಳಿಗಾಲದ ಸ್ಟ್ರಾಬೆರಿಗಳು

■ ಜಿ. ಬಸವರಾಜಪ್ಪ, ಮೈಸೂರು



ವಿಜಯ ಕುಮಾರಿ

ಒಂದೂರಿನಲ್ಲಿ ಒಬ್ಬ ಶ್ರೀಮಂತನಿದ್ದ. ಆತ ದುಷ್ಟ ಸ್ವಭಾವದವನಾಗಿದ್ದು ತನ್ನ ಸೇವಕರಿಗೆ ಹಿಂಸೆ ನೀಡಿ ಖುಷಿಪಡುತ್ತಿದ್ದ. ಚಳಿಗಾಲದ ಒಂದು ದಿನ ಆತ, ತನ್ನ ಸೇವಕನೊಬ್ಬನನ್ನು ಕರೆದು, 'ಇತ್ತೀಚಿನ ದಿನಗಳಲ್ಲಿ ನಾನು ಆರಾಮಾಗಿಲ್ಲ ಎಂದೆನಿಸುತ್ತಿದೆ. ಅದಕ್ಕಾಗಿ ಸ್ಟ್ರಾಬೆರಿಗಳನ್ನು ತಿಂದರೆ ಸರಿ ಹೋಗಬಹುದು. ಆದ್ದರಿಂದ ಹೋಗಿ ಒಂದಿಷ್ಟು ಸ್ಟ್ರಾಬೆರಿಗಳನ್ನು ತೆಗೆದುಕೊಂಡು ಬಾ' ಎಂದನು.

'ಕ್ಷಮಿಸಬೇಕು ಸ್ವಾಮಿ, ನಿಮ್ಮ ಕೋರಿಕೆ ಅಸಾಧ್ಯವಾದದ್ದು, ಏಕೆಂದರೆ ಚಳಿಗಾಲದಲ್ಲಿ ಸ್ಟ್ರಾಬೆರಿ ಗಿಡ ಹಣ್ಣು ಬಿಡುವುದಿಲ್ಲ' ಎಂದು ಸೇವಕ ಉತ್ತರಿಸಿದ.

'ಏನಂದೆ? ನನ್ನ ಕೋರಿಕೆ ಅಸಾಧ್ಯವೆನ್ನಲು ನಿನಗೆಷ್ಟು ಧೈರ್ಯ? ತನ್ನ ತಂದೆ ತಾಯಿಗಳನ್ನು ಪೋಷಿಸುವ ಸಲುವಾಗಿ ಮಂಜಿನಲ್ಲಿ ಬಿದಿರಿನಗಿಡ ನೆಟ್ಟವನ ಕಥೆ ಕೇಳಿಲ್ಲವೆ? ನೀನು ನಿನ್ನ ತಂದೆ ತಾಯಿಗಳಿಗೆ ಸೇವೆ ಸಲ್ಲಿಸಿದಂತೆ ಯಜಮಾನರಿಗೂ ಸೇವೆ ಮಾಡಬೇಕು. ಈಗ ಹೋಗು, ನಾಳೆ ಬೆಳಗಾಗುತ್ತಿದ್ದಂತೆ ನನಗೆ ಸ್ಟ್ರಾಬೆರಿ ತರಬೇಕು, ಅಷ್ಟೇ!' ಎಂದು ಆಜ್ಞಾಪಿಸಿದ.

ಸೇವಕನಿಗೆ ತನ್ನ ಯಜಮಾನ ಕ್ರೂರಿ ಮತ್ತು ಹಠವಾದಿ ಎಂಬ ಅರಿವಿತ್ತು. ನಿಷ್ಕಾರಣವಾಗಿ ಎಲ್ಲರ ಮುಂದೆ ತನ್ನ ಮೇಲೆ ರೇಗಿದ್ದು, ಸಹಿಸಲು ಅಸಾಧ್ಯವಾಗಿತ್ತು. ಆತ ಭಾರವಾದ ಹೃದಯದೊಡನೆ ದಟ್ಟವಾದ ಹಿಮದಲ್ಲಿ ನಿಧಾನವಾಗಿ ಹೆಜ್ಜೆ ಹಾಕುತ್ತಾ ತನ್ನ ಮನೆ ಸೇರಿದ.

ಅಪ್ಪಾ 'ಏನು ಸಮಸ್ಯೆ? ಯಾಕೆ ನಿಧಾನವಾಗಿ ಬರುತ್ತಿದ್ದೀರಿ? ಮಗ ಎಂದು ಪ್ರಶ್ನಿಸಿದ.

'ಏನಿಲ್ಲ... ಏನಿಲ್ಲ' ಎನ್ನುತ್ತ ಆತ ಮನೆಯೊಳಗಡೆ ಹೋಗಿ ಕುಳಿತ. ನಂತರ ನಡೆದ ವಿದ್ಯಮಾನವನ್ನು ಹೆಂಡತಿಗೆ ಹೇಳಿದ. ಅದನ್ನು ಕೇಳುತ್ತಿದ್ದ ಅವನ ಮಗ ಅಪ್ಪಾ ಚಿಂತೆ ಮಾಡದಿರಿ. ನಾನು ನಾಳೆಯೇ ನಿಮ್ಮ ಯಜಮಾನನನ್ನು ಭೇಟಿಯಾಗುತ್ತೇನೆ ಆಮೇಲೆ ಎಲ್ಲವೂ ಸರಿ ಹೋಗುತ್ತದೆ. ನೀವು ವಿಶ್ರಾಂತಿ ಪಡೆಯಿರಿ ಎಂದು ಸಮಾಧಾನ ಮಾಡಿದ.

ಮಗನ ಮಾತನ್ನು ಕೇಳಿದ ತಾಯಿ–ತಂದೆಯರು ಮುಗುಳ್ನಕ್ಕು ನಿದ್ರೆ ಹೋದರು.

ಮಾರನೆಯ ದಿನ ಆ ಬಾಲಕ ತನ್ನ ತಂದೆ ತಾಯಿ ಏಳುವ ಮೊದಲೇ ಎದ್ದು ಯಜಮಾನನ ದೊಡ್ಡ ಮನೆಗೆ ಹೋದನು. 'ಏಯ್, ನಿನಗೇನು ಕೆಲಸ ಇಲ್ಲಿ? ಯಾಕೆ ಬಂದೆ? ನಿಮ್ಮಪ್ಪ ಎಲ್ಲಿ ಎಂದು ಒಂದೇ ಸಮನೆ ಪ್ರಶ್ನಿಸಿದ ಯಜಮಾನ.

ಹುಡುಗ ತಲೆ ತಗ್ಗಿಸಿ 'ನಿನ್ನೆ ನನ್ನ ಅಪ್ಪ ಸ್ಟ್ರಾಬೆರಿ ಹುಡುಕಿಕೊಂಡು ಬೆಟ್ಟಕ್ಕೆ ಹೋದರು 'ಕ್ಷೀಣ ಸ್ವರದಲ್ಲಿ ನುಡಿದ.

'ಸರಿ, ಎಲ್ಲಿ ಹಾಳಾದ್ನೋ ಅವನು?'

ಅಪ್ಪನಿಗೆ ಅಲ್ಲಿ ವಿಷ ಸರ್ಪವೊಂದು ಕಚ್ಚಿ ಬಿಡ್ತು. ಈಗ ಅವರು ಮನೆಯಲ್ಲಿ ಮಲಗಿದ್ದಾರೆ.

'ಅಯ್ಯೋ ಅವಿವೇಕಿ, ನನ್ನನ್ನು ಮೂರ್ಖ ಎಂದು ಭಾವಿಸಿದೆಯಾ' ಅಬ್ಬರಿಸಿದ ಯಜಮಾನ.

'ಚಳಿಗಾಲದಲ್ಲಿ ಹಾವುಗಳು ಬಿಲದಿಂದ ಹೊರಗೆ ಬರುವುದಿಲ್ಲವೆಂದು ಎಲ್ಲರಿಗೂ ಗೊತ್ತು' ಯಾಕೆಂದರೆ ತುಂಬಾ ಚಳಿ.

ಯಜಮಾನರೆ... ಹಾಗಾದರೆ ಸ್ವಲ್ಪ ದನಿ ಎತ್ತರಿಸಿ ಹೇಳಿದ.

ಚಳಿಗಾಲದಲ್ಲಿ ಹಾವುಗಳು ಇಲ್ಲವೆಂದ ಮೇಲೆ ಸ್ಟ್ರಾಬೆರಿಗಳು ಹೇಗೆ ತಾನೆ ಇರಲಿಕ್ಕೆ ಸಾಧ್ಯ?

ಈಗ ಯಜಮಾನನ ಬಾಯಿ ಕಟ್ಟಿ ಹೋಯಿತು. ಆತನ ಮುಖ್ಯ ಕಪ್ಪಿಟ್ಟಿತು. ಆತ ಅಲ್ಲಿ ನಿಲ್ಲಲಾರದೆ ಸರಸರನೆ ಮನೆಯೊಳಗೆ ನಡೆದು ಬಿಟ್ಟ. ನಂತರದಲ್ಲಿ ಆತ ತನ್ನ ಸೇವಕರಿಗೆ ಅಸಾಧ್ಯವಾದ ಕೆಲವನ್ನು ನಿರ್ದೇಶಿಸುವುದನ್ನು ಬಿಟ್ಟ. ■



ವಿಜಯ ಕುಮಾರಿ

## ತಾರಸಿ ತೋಟ

ಮನೆಯ ತಾರಸಿಯಲ್ಲಿ
ಪುಟ್ಟ ತೋಟ ಮಾಡುವ
ಹೂವು ಹಣ್ಣು ಕಾಯಿಪಲ್ಲೆ
ಎಲ್ಲಾ ಬೆಳೆಯುವ...

ಮಲ್ಲಿಗೆ ಕಾಕಡ ಜಾಜಿ ರೋಜ
ಗಿಡಗಳ ನೆಡುವ
ಅಕ್ಕ ಅಮ್ಮಗೆ ಹೂವನು ಕೊಟ್ಟು
ಖುಷಿಯ ಪಡೆಯುವ...

ಬೆಂಡೆ ಬದನೆ ಜವಳಿ ಹುರುಳಿ
ಜೊಂಪೆ ಜೊಂಪೆಯು
ಹಸಿಮೆಣಸು ಟೊಮ್ಯಾಟೊ ಹೀರೆ
ಕೆಜಿ ಕೆಜಿಯು...

ಸೋರೆ ಕುಂಬಳ ಸೌತೆ ಗಜ್ಜರಿ
ಬುಟ್ಟಿ ತುಂಬಲು
ಪಾಲಕ್ಕು ಪುದೀನ ಮೆಂತ್ಯ ದಂಟು
ಕಂತೆ ಕಂತೆಯು...

ಪಪ್ಪಾಯಿ ಸೀಬೆ ಕರಿಬೇವು ನುಗ್ಗೆ
ತ್ವಚೆಯ ಕಾವಲಿಗೆ
ಪ್ರೊಟೀನು ಪೋಷಕಾಂಶ ಸತ್ವ
ದೇಹದ ಪೋಷಣೆಗೆ...

ಸಂಜೆ ಬೆಳಿಗ್ಗೆ ತೋಟದಲ್ಲಿ
ಕಳೆಯ ಕೀಳುವ
ನೀರು ಗೊಬ್ಬರ ಹಾಕಿ ಗಿಡವ
ಜತನ ಮಾಡುವ...

ತಾವೂ ತಾರಸಿಯ ಮೇಲೆ
ತೋಟವ ಮಾಡಿರಿ
ಸಾವಯವ ಕೃಷಿಯ ಮಾಡಿ
ಆರೋಗ್ಯ ಹೊಂದಿರಿ...

■ ಎಂ.ಡಿ. ಚಂದ್ರೇಗೌಡ
ನಾರಮ್ನಳ್ಳಿ